# <u>ಕಿಯಾನಿಕ್ಸ್ ಜಿಲ್ಲಾ ಸಮನ್ವಯ ಅಧಿಕಾರಿಗಳ/ ತರಬೇತಿ ಅಧಿಕಾರಿಗಳ</u>
# <u>ವಾರ್ಷಿಕ ಪ್ರಗತಿ ಪರಿಶಿಲನಾ ಸಭೆಯ ನಡವಳಿಗಳು</u>

<u>ದಿನಾಂಕ 15/5/2009 ರಂದು ಕೇಂದ್ರ ಕಛೇರಿಯಲ್ಲಿ ಬೆಳಿಗ್ಗೆ 11 ಘಂಟೆಗೆ</u>

<u>ಸಭೆಯಲ್ಲಿ ಹಾಜರಿದ್ದವರು:</u>

1. ಶ್ರೀ ಎಂ ಯಂಗಾರೆಡ್ಡಿ - ಅಧ್ಯಕ್ಷರು, ಕಿಯಾನಿಕ್ಸ್
2. ಶ್ರೀ ಬಿ ಎಸ್ ಪತ್ರಿ - ನಿರ್ದೇಶಕರು ನಿರ್ವಹಣೆ, ಕಿಯಾನಿಕ್ಸ್
3. ಶ್ರೀ ಬಂಡು ಜಿ. ಸಸಲಟ್ಟಿ - ಪ್ರಧಾನ ವ್ಯವಸ್ಥಾಪಕರು (ITES & HR)
4. ಶ್ರೀ ಟಿ ಆರ್ ಮಂಜುನಾಥ್ - ವ್ಯವಸ್ಥಾಪಕರು (ಮಾಹಿತಿ ಸಿಂಧು ಯೋಜನೆ)
5. ಶ್ರೀ ಶಿವಕುಮಾರ್ ಕರಡಕಲ್ - ವ್ಯವಸ್ಥಾಪಕರು (ITES)
6. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ತರಬೇತಿ ಮುಖ್ಯಸ್ಥರುಗಳು, ಕಿಯಾನಿಕ್ಸ್

<u>ಗೈರು ಹಾಜರಿ</u>

ಶ್ರೀ ಹೆಚ್ ದೇವಾನಂದ್ - ವ್ಯವಸ್ಥಾಪಕರು, ಹುಬ್ಬಳ್ಳಿ

ಶ್ರೀ ಸುಧಾಕರ್ ನಾಯ್ಕ್ - ಮಂಗಳೂರು

ಶ್ರೀ ಜಿ. ಆರ್. ಚನ್ನಪ್ಪ, ವ್ಯವಸ್ಥಾಪಕರು, ಶ್ರೀ ಕೆ. ಜಿ. ಶ್ರೀನಿವಾಸ್ ಮತ್ತು ಶ್ರೀ ಶ್ರೀಪಾದಚಾರ್ - ಬೆಂಗಳೂರು

-----

ಸಭೆಯ ಅಧ್ಯಕ್ಷತೆಯನ್ನು, ಅಧ್ಯಕ್ಷರು, ಕಿಯಾನಿಕ್ಸ್ ವಹಿಸಿದ್ದರು.

ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕರುಗಳು,ಜಿಲ್ಲಾ ಸಮನ್ವಯ ಆಧಿಕಾರಗಳನ್ನು ಹಾಗು ತರಬೇತಿ ಅಧಿಕಾರಿಗಳನ್ನು , ಶ್ರೀ ಬಂಡು ಜಿ. ಸಸಲಟ್ಟಿ - ಪ್ರಧಾನ ವ್ಯವಸ್ಥಾಪಕರು (ITES & HR) ರವರು, ಸ್ವಾಗತ ಕೋರಿದರು. ಮುಂದುವರೆದು ಹಾಗೂ 2009-10ರಲ್ಲಿ ಗುರಿ ಬಗ್ಗೆ ಮತ್ತು ಸೂಕ್ತ ಪರಿವಿಕ್ಷಣೆ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಪ್ರಾಸ್ತಾವಿಕವಾಗಿ ಎಲ್ಲ ಜಿಲ್ಲಾ ಸಮನ್ವಯ ಆಧಿಕಾರಗಳನ್ನು ಹಾಗೂ ತರಬೇತಿ ಅಧಿಕಾರಿಗಳಿಗೆ ವಿವರಿಸಿದರು. ತದನಂತರ ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಕೇಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದರು.

- ನಮ್ಮ ಸ೦ಸ್ಥೆಯು 2009-10 ನೇ ಸಾಲಿನಲ್ಲಿ ರೂ. 100 ಕೋಟಿ ಆರ್ಥಿಕ ಗುರಿಯನ್ನು ಸಾಧಿಸಲು ಯೋಜನೆ ಹಾಕಿದೆ.
- ಅದಕ್ಕನುಗುಣವಾಗಿ ಎಲ್ಲ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ ಈ ಮಹತ್ತರ ಗುರಿ ಸಾಧಿಸಲು ಸತತ ಪ್ರಯತ್ನ ಹಾಗೂ ಶ್ರಮಪಡಲು ಸಲಹೆ ಮಾಡಿದರು.

♦ ಜಿಲ್ಲೆಗಳಿಂದ ಬಂದ ತರಬೇತಿ ಅಧಿಕಾರಿಗಳಿಗೆ ಮತ್ತು ಜಿಲ್ಲಾ ಸಮನ್ವಯ ಅಧಿಕಾರಿಗಳಿಗೆ, ತರಬೇತಿ ಕೇಂದ್ರಗಳು ಈಗಿರುವ ಲಾಭಕ್ಕಿಂತ ಹೆಚ್ಚಿನ ಲಾಭವನ್ನು ಗಳಿಸಿ ಪ್ರಗತಿ ಪಥದಲ್ಲಿ ಕೊಂಡೊಯುವಂತೆ ಮತ್ತು ನಿಗಮದ ಹೆಸರನ್ನು ಉನ್ನತ ಮಟ್ಟಕ್ಕೆ ತರುವಂತೆ ಅಧ್ಯಕ್ಷರು ಸೂಚಿಸಿ ದರು.

♦ ಸರ್ಕಾರದಿಂದ ಯಾವುದೇ ತರಹದ ಸಹಾಯ ಬೇಕಾದಲ್ಲಿ , ಮಾನ್ಯ ಮಾಹಿತಿ ತಂತ್ರಜ್ಞಾನ,ಜೈವಿಕ ತಂತ್ರಜ್ಞಾನ ಹಾಗೂ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವರ ಜೊತೆ ಚರ್ಚಿಸಿ ಸಹಾಯ ಕೋರುವದಾಗಿ ತಿಳಿಸಿದರು.

♦ ಕೆಲವು ಜಿಲ್ಲಾ ಸಮನ್ವಯ ಅಧಿಕಾರಿಗಳು ಕೆಲಸಕಾರ್ಯಗಳನ್ನು ನಿರ್ವಹಿಸಲು ಕೇಳಿದ ಅವಶ್ಯಕ ಸೌಲಭ್ಯ (ಪ್ರವಾಸ ಭತ್ಯೆಯ) ಗಳ ಬಗ್ಗೆ ಕೇಳಿದಾಗ, ವ್ಯವಸ್ಥಾಪಕ ನೀರ್ದೇಶಕರ ಜೋತೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೂಳ್ಳುವದಾಗಿ ತಿಳಿಸಿದರು.

♦ ಕೆಲ ತರಬೇತಿ ಅಧಿಕಾರಿಗಳು, ಕೇಂದ್ರಗಳಲ್ಲಿ ತುಂಬಾ ಹಳೆಯ ಕಂಪ್ಯೂಟರ್‌ಗಳಿದ್ದು, ಕೂಡಲೇ ಹೊಸ ಕಂಪ್ಯೂಟರ್‌ಗಳನ್ನು ಹಾಗೂ ಇತರ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕೇಳಿದ್ದಕ್ಕೆ , ಸೂಕ್ತ ಕ್ರಮ ಜರುಗಿಸಲು ನಿರ್ದೇಶಕರು (ನಿ) ರವರಿಗೆ ಸಲಹೆ ಮಾಡಿದರು.

♦ ಎಲ್ಲಾ ಜಿಲ್ಲೆಗಳಿಗೂ ಮುಂದಿನ ಮಾಹೆಯಿಂದ ಪ್ರವಾಸ ಕೈಗೊಳ್ಳುತ್ತೇನೆಂದು ತಿಳಿಸಿದರು.

ಅಧ್ಯಕ್ಷರು ತುರ್ತು ಕೆಲಸದ ಮೇರೆಗೆ ಬೇರೆ ಸಭೆಯಲ್ಲಿ ಭಾಗವಹಿಸಬೇಕಾಗಿರುವುದಾಗಿ ತಿಳಿಸಿ, ನಿರ್ದೇಶಕರು ನಿರ್ವಹಣೆ ಇವರಿಗೆ ಜಿಲ್ಲಾವಾರು /ತಾಲ್ಲೂಕುವಾರು ಪ್ರಗತಿ ವರದಿಯನ್ನು ಪರಿಶೀಲಿಸುವಂತೆ ಸೂಚಿಸಿ ನಿಗ ್ಮಿಸಿದರು. ಮುಂದಿನ ಸಭೆಯಲ್ಲಿ ಸ್ವತ: ಪರಿಶೀಲಿಸುವುದಾಗಿ ಅಧ್ಯಕ್ಷರು ತಿಳಿಸಿದರು.

ನಿರ್ದೇಶಕರು (ನಿ) ರವರು, ಒಟ್ಟು 256 ಕೇಂದ್ರಗಳ ಬೌತಿಕ ಮತ್ತು % ಗುರಿ ಸಾದನೆಯನ್ನು ಜಿಲ್ಲಾವಾರು ಪ್ರಗತಿ ಪರಿಶಿಲನೆ ಮಾಡಿ, ಈ ಕೆಳಕಂಡ ವಿಷಯಗಳನ್ನು ಪ್ರಸ್ತಾಪಿಸಿದರು.

1. ಜಿಲ್ಲಾ ಸಮನ್ವಯ ಆಧಿಕಾರಗಳು 0% ಹಾಗೂ 50% ಕ್ಕು ಕಡಿಮೆ ಗುರಿ ಸಾಧಿಸಿರುವ ಕೇಂದ್ರಗಳನ್ನು ವಿಶೇಷವಾಗಿ ಪರಿವಿಕ್ಷಣೆ ಮಾಡಿ, ಈ ವರ್ಷ 100% ಗುರಿ ಸಾಧಿಸುವಂತೆ ಸೂಕ್ತ ಕ್ರಮ ಜruಗಿಸಲು ಸೂಚಿಸಿದರು.
2. ಜಿಲ್ಲಾ ಸಮನ್ವಯ ಅಧಿಕಾರಿಗಳು, ಎಲ್ಲ ಜಿಲ್ಲಾಕಛೇರಿಗಳಿಗೆ ಮತ್ತು ಜಿಲ್ಲೆಯ ಸಂಬಂದಪಟ್ಟ ಅಧಿಕಾರಿಗಳನ್ನು ಸರ್ಪಕಿಸುವಂತೆ ಹಾಗೂ ಅವಶ್ಯವಿದ್ದಲ್ಲಿ ಪತ್ರ ಬರೆಯಲು ಸೂಚಿಸಿದರು.
3. ಜಿಲ್ಲಾ ಸಮನ್ವಯ ಅಧಿಕಾರಿಗಳಿಗೆ ಕಾರ್ಯನಿರ್ವಹಣೆ ಮತ್ತು ಜವಾಬ್ದಾರಿಯ ಬಗ್ಗೆ ಮಾಹಿತಿ ನೀಡಿ, ಜಿಲ್ಲಾ ಸಮನ್ವಯ ಅಧಿಕಾರಿಗಳು ಕಟ್ಟು ನಿಟ್ಟಾಗಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವಂತೆ ಸೂಚಿಸಿದರು
4. ಜಿಲ್ಲಾ/ತಾಲ್ಲೂಕು/ಹೋಬಳಿ ಮಟ್ಟದಲ್ಲಿ ಸರ್ಕಾರದ ಮಟ್ಟದಲ್ಲಿ ತರಬೇತಿ ಆದೇಶಗಳನ್ನು ಪಡೆಯುವಲ್ಲಿ ಖುದ್ದಾಗಿ ಸರ್ಕಾರಿ ಕಛೇರಿಗಳಿಗೆ ಬೇಟಿ ನೀಡಿ ಪ್ರಸ್ತಾವನೆಗಳನ್ನು ಸಲ್ಲಿಸಿ, ತರಬೇತಿ ಆದೇಶಗಳನ್ನು ಪಡೆಯುವಲ್ಲಿ ಯಶಸ್ವಿಯಾಗಬೇಕೆಂದು ಸೂಚಿಸಿದರು.
5. Bank ಖಾತೆ ತೆಗೆಯುವಲ್ಲಿ KEONICS yuva.com/KEONICS franchisee ತರಬೇತಿ ಕೇಂದ್ರ ಇವುಗಳ ಹೆಸರಿನಲ್ಲಿ ಖಾತೆ ತೆರೆಯಬಾರದು, ಒಂದು ವೇಳೆ ಈವರೆವಿಗೂ ತೆರೆದಿದ್ದ ಖಾತೆಯನ್ನು ರದ್ದುಪಡಿಸಿ ಅವರ ವೈಯಕ್ತಿಕ ಸಂಸ್ಥೆ ಹೆಸರಿನಲ್ಲಿ ಖಾತೆ ತೆರೆಯುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

6. ಪ್ರತಿ ತರಬೇತಿ ಕೇಂದ್ರದಲ್ಲೂ Register ತೆರೆದು ಅದರಲ್ಲಿ ವಿಚಾರಣ ಪುಸ್ತಕದಲ್ಲಿ ಹೆಸರು, ಪೂರ್ಣವಿಳಾಸ ದೂರವಾಣಿ ಸಂಖ್ಯೆಗಳನ್ನು ನಮೂದಿಸಿರತಕ್ಕದ್ದು.
7. ಮತ್ತೋಂದು Register ನಲ್ಲಿ ತರಬೇತಿಗೆ ನೊಂದಣಿ ಮಾಡಿಕೊಂಡ ಕೂಡಲೆ ನಿಗಮದ ಅರ್ಜಿ ಸಂಖ್ಯೆ, course ಅವಧಿ, ಹಣದ ರಸೀದಿ, ಸಂದಾಯ ಸಂಖ್ಯೆ ದಿನಾಂಕ, course ಶುಲ್ಕ /ಕಂತಿನ ಅವದಿಯನ್ನು ನಮೂದಿಸತಕ್ಕದ್ದು ಹಾಗೂ ಈ ಕಾರ್ಯವನ್ನು 1/4/2009 ರಿಂದಲೇ ಜಾರಿಗೆ ತರಿವಂತೆ ಸೂಚಿಸಿದರು.
8. ಸರ್ಕಾರಿ ಆದೇಶಗಳನ್ನು KEONICS yuva.com/franchisee ಯವರು ಅವರೇ ಸರ್ಕಾರಿ ಆದೇಶಗಳನ್ನು ಪಡೆದು, ಸದರಿ ಕಛೇರಿಗಳಿಂದ Cheque/DD ಯನ್ನು ಸಹ KEONICS yuva.com/franchisee ಹೆಸರಿನಲ್ಲಿ ಪಡೆದು, ಖಾತೆಗೆ ಜಮೆ ಮಾಡುತ್ತಿರಿವದ ತಿಳಿದು ಬಂದಿದೆ. KEONICS ಸಂಸ್ಥೆಗೆ ಈ ವಿಷಯಗಳ ಮಾಹಿತಿ ಒದಗಿಸದೆ ,ಅನ್ಯಾಯವಾಗುತ್ತಿದೆ.ಅದನ್ನು ತಡೆಗಟ್ಟಲು ಕ್ರಮ ಜರುಗಿಸಲು ತಿಳಿಸಿದರು.
9. ಜಿಲ್ಲೆಯ ಸಂಪೂರ್ಣ ಜವಾಬ್ಬಾರಿಯು ಜಿಲ್ಲಾ ಸಮನ್ವಯ ಅಧಿಕಾರಿಗಳ ಮೇಲಿರುವುದರಿಂದ ಜಿಲ್ಲಾವಾರು ಬೇಡಿಕೆಯನ್ನು ಆರ್ಥಿಕ ಪ್ರಗತಿಯ ಬಗ್ಗೆ ಗುರಿಸಾಧಿಸಲು ಒತ್ತು ನೀಡುವಂತೆ ತಿಳಿಸಿದರು.
10. ಈಗಾಗಲೇ ದಿನಾಂಕ 21.02.2009ರಂದು ಪ್ರಮಾಣ ಪತ್ರಗಳ ವಿತಾರಣಾ ಸಮಾರಂಭದಲ್ಲಿ ಪ್ರಕಟಿಸಲಾಗಿದ್ದ ತರಬೇತಿ ಶುಲ್ಕವನ್ನು ಪರಿಷ್ಕರಿಸಲಾಗಿದ್ದು, ಸದರಿ ಪರಿಷ್ಕತ ಶುಲ್ಕದ ಮಾಹಿತಿಯನ್ನು ಕೊರ್ಸ್ ವಿವರವನ್ನು ಮತ್ತು ತರಬೇತಿ ಕೇಂದ್ರದ ನಿರ್ವಹಣೆಯ ಬಗ್ಗೆ ವಿವರಗಳನ್ನು ಅಂಚೆಯ ಮೂಲಕ ಕಳಿಸಲಾಗಿರುತ್ತದೆ, ಒಂದು ವೇಳೆ ನಿಮಗೆ ತಲುಪದ ಪಕ್ಷದಲ್ಲಿ Keonics Web Siteನಲ್ಲಿ ಪ್ರಕಟಿಸಲಾಗಿ ರುತ್ತದೆ ಅದನ್ನು ನೋಡಿ Down Load ಮಾಡಿಕೊಂಡು ಸದರಿ ಸೂಚನೆಯ ಮೇರೆಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸುವುದು ಎಂದು ತಿಳಿಸಿರುತ್ತಾರೆ.
11. 29 ಜಿಲ್ಲೆಗಳ ಪ್ರಗತಿಯನ್ನು ಪರಿಶೀಲಿಸಲಾಗಿ, ಕೆಲವು ಜಿಲ್ಲೆಗಳಲ್ಲಿ ಪ್ರಗತಿಯ ನ್ನು ಪರಿಶೀಲಾಗಿ, ಕೆಲವು ಜಿಲ್ಲೆಗಳಲ್ಲಿ ಪ್ರಗತಿಯು ಕುಂಠಿತಗೊಂಡಿರುವ ಬಗ್ಗೆ ನಿರ್ದೇಶಕರು ನಿರ್ವಹಣೆಯವರು ಸಮನ್ವಯ ಅಧಿಕಾರಿ ಹಾಗೂ ಸಮನ್ವಯ ಅಧಿಕಾರಿಗಳು ಇಲ್ಲದ ಜಿಲ್ಲೆಗಳಲ್ಲಿ ತರಬೇತಿ ಅಧಿಕಾರಿಗಳ ಕಾರ್ಯನಿರ್ವಹಣೆ ಬಗ್ಗೆ ಜವಾಬ್ದಾರಿ ತೆಗೆದುಕೊಂಡು ಪ್ರಗತಿಯನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುವಂತೆ ಕಟ್ಟುನಿಟ್ಟಾಗಿ ಸೂಚಿಸಿದರು
12. ಹಾಗೂ ತರಬೇತಿ ಅಧಿಕಾರಿಗಳು /ಸಮನ್ವಯ ಅಧಿಕಾರಿಗಳು ಇನ್ನು ಮುಂದೆ ಪ್ರವಾಸ ಕೈಗೊಂಡಾದ ನಂತರ, ಪ್ರವಾಸದ ಬಿಲ್ಲ್ ಜೊತೆಗೆ ವರದಿ ಸಲ್ಲಿಸದಿದ್ದಲ್ಲಿ, ಅಂತಹ ಪ್ರವಾಸ ಭತ್ಯೆಯನ್ನು ಅನುಮೋದಿಸುವುದಿಲ್ಲವೆಂದು ಸೂಚಿಸಿ ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಲಾಯಿತು.
13. ನಿಗಮದಲ್ಲಿ 24 Yuva.com Fran chaise ಗಳಲ್ಲಿ ನಿಗಮದ ಜೊತೆ ಕೆಲವರು ಕರಾರು ಮತ್ತು ಒಪ್ಪಂದವನ್ನು ಮಾಡಿಕೊಂಡಿರುವುದಿಲ್ಲ , ಅದನ್ನು ಈ ಕೂಡಲೇ ಮಾಡಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಹಾಗೂ ಒಂದು ವೇಳೆ ಕರಾರು ಮತ್ತು ಒಪ್ಪಂದ ಮಾಡಿಕೊಳ್ಳದ Yuva.com Franchise ಗಳನ್ನು ಕೊಡಲೇ ರದ್ದು ಪಡಿಸಲು ಶಿಫಾರಸ್ಸು ಮಾಡಬೇಕೆಂದು ಸೊಚಿಸಲಾಯಿತು
14. ಈಗಾಗಲೇ 2006-07 ನೇ ಸಾಲಿನ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಕಂಪ್ಯೂಟರ್ ತರಬೇತಿಯನ್ನು ಸರ್ಕಾರದಿಂದ ಕೇವಲ 24 ಜಿಲ್ಲೆಗಳಲ್ಲಿ ಮಾತ್ರ ಅನುಷ್ಟಾನಗೊಳಿಸಲಾಗುತ್ತಿದ್ದು ಉಳಿದ 5 ಜಿಲ್ಲೆಗಳಲ್ಲಿ ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ಅನುಷ್ಟಾನ ರೂಪಕ್ಕೆ ತರುವಂತೆ ಕ್ರಮ

ಕೈಗೊಳ್ಳುವುದು ಹಾಗೂ ರಾಜ್ಯದ 5 ಜಿಲ್ಲೆಗಳಲ್ಲಿ BRGF ಯೋಜನೆಯನ್ನು ಅನುಷ್ಟಾನಗೊಳಿಸಲು ಕೇಂದ್ರ ಸರ್ಕಾರದ ಅನುದಾನದೊಂದಿಗೆ ಅನುಷ್ಟಾನಗೊಳಿಸಲು ಕಿಯಾನಿಕ್ಸ್‌ಗೆ ಆದೇಶ ನೀಡಲಾಗಿದ್ದು, ಸದರಿ ಯೋಜನೆಯಡಿಯಲ್ಲಿ ನಿಗಮಕ್ಕೆ ಶೇಕಡವಾರು ಅನುಮೋದನೆಗೊಂಡ ಆದೇಶಗಳು ಕಾಲ ಕಾಲಕ್ಕೆ ತಲುಪುತ್ತಿಲ್ಲವೆಂದು ತಿಳಿಸಿ ಆದರ ಬಗ್ಗೆ ಕ್ರಮವಹಿಸುವಂತೆ ತಳಿಸಿದರು.

ಎಲ್ಲಾ ತರಬೇತಿ ಕೇಂದ್ರದ ಮುಖ್ಯಸ್ಥರು, ಕೇಂದ್ರ ಕಛೇರಿಗೆ ನೇರ ಸಂಪರ್ಕವಿದ್ದು , ಜಿಲ್ಲಾ ಸಮನ್ವಯ ಅಧಿಕಾರಿಗಳಿಗೆ ಯಾವುದೇ ಮಾಹಿತಿಯಾಗಳು, ಲಭ್ಯವಿಲ್ಲದಿರುವದರಿಂದ, ಗುರಿ ( Target ) ಬಗ್ಗೆಯಾಗಲಿ ಅಥವಾ ಇನ್ನಿತರ ನಿಯಂತ್ರಣಗಳನ್ನು ವಿಧಿಸುವದು ಕಷ್ಟವಾಗುವುದೆಂದು ತಿಳಿಸಿದರು. ಇದಕ್ಕೆ ಉತ್ತರವಾಗಿ, ಪ್ರಧಾನ ವ್ಯವಸ್ಥಾಪಕರು (ITES & HR) ರವರು, ಇನ್ನು ಮುಂದೆ ಎಲ್ಲಾ ಪತ್ರ ವ್ಯವಹಾರಗಳು, ಸಂಭಂದಪಟ್ಟ ಸಮನ್ವಯ ಅಧಿಕಾರಿಗಳು /ತರಬೇತಿ ಅಧಿಕಾರಿಗಳ ಮುಖಾಂತರ ಕಳಿಸಲು ಸುತ್ತೋಲೆ ಹೂರಡಿಸುವದಾಗಿ ತಿಳಿಸಿದರು.

ಅದಲ್ಲದೆ ಜಿಲ್ಲಾ ಸಮನ್ವಯ ಅಧಿಕಾರಿಗಳು ಈ ಕೆಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪಿಸಿದರು.

- 1996 ಸಾಲಿನಿಂದ ಚಾಲ್ತಿಯಲ್ಲಿರುವ TA / DA ಭತ್ಯೆಗಳ ಪರಿಷ್ಕರಣ ಬಗ್ಗೆ
- ಬೆಂಗಳೂರು ಹೊರತು ಪಡಿಸಿ , ಜಿಲ್ಲೆ ಮತ್ತು ತಾಲೂಕಗಳಲ್ಲಿ ಕಾರ್ಯ ನಿರ್ವಹಿಸಿತ್ತಿರುವ KEONICS ಅಧಿಕಾರಿಗಳಿಗೆ mobile ಸಂಪರ್ಕ ಒದಗಿಸುವ ಬಗ್ಗೆ ( ಉಳಿದವರಿಗೆ)
- KEONICS ತರಬೇತಿ ಕೇಂದ್ರಗಳಲ್ಲಿ Broadband WLL ಇಂಟರ್‌ನೇಟ್ ಸಂಪರ್ಕಜಾಲವನ್ನು ಒದಗಿಸುವ ಬಗ್ಗೆ.
- KEONICS ತರಬೇತಿ ಕೇಂದ್ರಗಳಲ್ಲಿ faculty ಭೋಧನಾ ಶುಲ್ಕ ಪರಿಷ್ಕರಣ ಬಗ್ಗೆ.

ಪ್ರಧಾನ ವ್ಯವಸ್ಥಾಪಕರು (ITES & HR) ರವರು, ಈ ವಿಷಯಗಳನ್ನು ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತಂದು, ಸೂಕ್ತ ಕ್ರಮ ಜರುಗಿಸುವದಾಗಿ ತಿಳಿಸಿದರು.

ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ನಿರ್ದೇಶಕರು ( ನಿರ್ವಹಣೆ)**